2015 ಕ.ತೀ.ವ. 266

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

ಪ್ರವೀಣ್ ಗುಪ್ತ –ವಿರುದ್ಧ– ಶ್ರೀ ಸಿ.ಎಲ್. ಶೇಷಾದ್ರಿ ಮತ್ತು ಇತರರು *

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 96ರಡಿಯಲ್ಲಿ ನಿಯತ ಮೊದಲನೇ ಮೇಲ್ಮನವಿ.

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ XX ಕ್ರಮಾದೇಶ 12.

ಮೇಲ್ಮನವಿದಾರ/ಪ್ರತಿವಾದಿಗಳು ಎದುರುದಾರ/ವಾದಿಯರ ಸ್ವತ್ತಿಗೆ ಸಂಬಂಧಿಸಿದಂತೆ ಒಪ್ಪಂದವನ್ನು ಮಾಡಿಕೊಂಡು ಸ್ವತ್ತಿನಲ್ಲಿ ಬಾಡಿಗೆದಾರರಾಗಿ ಅನುಭವದಲ್ಲಿರುತ್ತಾರೆ. ಕರಾರಿನ ಷರತ್ತನ್ನು ಉಲ್ಲಂಘಿಸಿದರೆಂಬ ಕಾರಣಕ್ಕಾಗಿ ಮೇಲ್ಮನವಿದಾರರ ವಿರುದ್ಧ ಎದುರುದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿ ದಾವೆಯು ಊರ್ಜಿತಸಲ್ಪಡುತ್ತದೆ. ತೀರ್ಪು ಹಾಗೂ ಡಿಕ್ರಿಯ ಅನ್ವಯ ಮೇಲ್ಮನವಿದಾರರು ಎದುರುದಾರರಿಗೆ ದಾವಾಸ್ವತ್ತನ್ನು ಹಸ್ತಾಂತರಿಸುವುದಲ್ಲದೆ, ಸ್ವತ್ತಿನ ಹಸ್ತಾಂತರದ ದಿನದವರೆಗೆ ಮಾಸಿಕ 3,00,000/– ರೂ.ಗಳನ್ನು ನೀಡಬೇಕೆಂದು ನೀಡಿದ ತೀರ್ಪಿನ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ XX ಕ್ರಮಾದೇಶ 12ರ ವಿಚಾರಣೆ ಬಾಕಿಯಿದ್ದ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ತಾತ್ಕಾಲಿಕ ನಷ್ಟಪರಿಹಾರದ ಮೊತ್ತವನ್ನು ನಿರ್ಧರಿಸುವ ಅಧಿಕಾರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿಯಲ್ಲಾಗಲೀ ಅಥವಾ 1882ರ ಸ್ವತ್ತಿನ

* ಆರ್.ಎಫ್.ಎ. ಸಂ. 900/2005 (ಆರ್ಇಎಸ್–ಡಿಬಿ), ಇದರೊಂದಿಗೆ ಇತರೆ,
ದಿನಾಂಕ: 09ನೇ ಜೂನ್, 2014.

**ಹಸ್ತಾಂತರ ಕಾಯಿದೆಯಡಿಯಲ್ಲಿ ಲಭ್ಯವಿಲ್ಲದಿದ್ದರೂ ಎದುರುದಾರರು ಹಾಜರುಪಡಿಸಿದ ದಾಖಲಾತಿಗಳನ್ನು ಹಾಗೂ ನಡೆಸಿದ ಸಾಕ್ಷ್ಯಾಧಾರಗಳನ್ನಾಧರಿಸಿ ನಿರ್ಧರಿಸಿದ ಪರಿಹಾರ ಧನ ಆದೇಶ ಕ್ರಮದಲ್ಲಿ ಯಾವುದೇ ದೋಷವಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.**

ಅಪೀಲುದಾರರ ಪರ : ಶ್ರೀ ಕೆ. ಶಶಿಕಿರಣ ಶೆಟ್ಟಿ ಪರವಾಗಿ
ಶ್ರೀ ಯೋಗಾನರಸಿಂಹ – ಹಿರಿಯ ವಕೀಲರು
ಪ್ರತ್ಯಪೀಲುದಾರರ ಪರ : ಶ್ರೀ ಅರುಣ್ ಕುಮಾರ್ – ವಕೀಲರು
ಸಿ 1ರಿಂದ 4ರವರೆಗೆ ಮೆ: ಕ್ರೆಸ್ಟ್ ಲಾ ಪಾರ್ಟನರ್ಸ್ – ವಕೀಲರು
5ರಿಂದ 7ನೇ ಪ್ರತ್ಯಪೀಲುದಾರರು are dispensed with V.C.O Dt. 18.07.2013
9ನೇ ಪ್ರತ್ಯಪೀಲುದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ
ಆರ್.ಎಫ್.ಎ. ಸಂ. 900/2005 :
ಆರ್.ಎಸ್.ಎ.ಸಂ. 36/2012
ಅಪೀಲುದಾರರ ಪರ : ಶ್ರೀ ಅರುಣ್ ಕುಮಾರ್ – ವಕೀಲರು
ಮೆ: ಕ್ರೆಸ್ಟ್ ಲಾ ಪಾರ್ಟನರ್ಸ್ ಪರವಾಗಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಕೆ.ಎಲ್.ಮಂಜುನಾಥ್ :**

1ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ ನ್ಯಾಯಾಧೀಶರು, ಬೆಂಗಳೂರು ಇವರ ಕಡತದ ಮೇಲೆ ಮೂಲ ದಾವೆ ಸಂ. 1999ರ 4964ರಲ್ಲಿ ಮೊದಲ ಪ್ರತಿವಾದಿಗಳಾಗಿರುವಂಥ ಅಪೀಲುದಾರರು 2005ರ ಆರ್.ಎಫ್.ಎ. 900ನ್ನು ಸಲ್ಲಿಸಿರುತ್ತಾರೆ. ಈ ಅಪೀಲಿನಲ್ಲಿನ 1ರಿಂದ 4ರವರೆಗಿನ ಪ್ರತಿವಾದಿಗಳು ವಾದಿಗಳಾಗಿರುತ್ತಾರೆ ಮತ್ತು 5ರಿಂದ 9ರ ಪ್ರತಿವಾದಿಗಳು ದಾವೆಯಲ್ಲಿನ ಇತರೆ ಪ್ರತಿವಾದಿಗಳಾಗಿರುತ್ತಾರೆ.

2. ಇಲ್ಲಿನ ಅಪೀಲುದಾರನು, ತೀರ್ಪು ನೀಡಿರುವ ದಿನಾಂಕದಿಂದ 60 ದಿವಸಗಳ ಒಳಗೆ ದಾವಾ ಅನುಸೂಚಿತ ಸ್ವತ್ತನ್ನು ತೆರವುಗೊಳಿಸಲು ಮತ್ತು ಹಸ್ತಾಂತರ ಮಾಡಲು ಈ ಮೂಲಕ ಅಪೀಲುದಾರನಿಗೆ ನಿರ್ದೇಶಿಸಿ ಡಿಕ್ರಿಯನ್ನು ಪಾಸು ಮಾಡಿ, ಮತ್ತು ಮುಂದುವರೆದು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಉದ್ದೇಶಿಸಿದಂತೆ ವಿಚಾರಣೆ ನಡೆಸತಕ್ಕದ್ದೆಂದು ಡಿಕ್ರಿ ಮಾಡಿ ಮತ್ತು ಆದೇಶಿಸಿ ಅಧೀನ ನ್ಯಾಯಾಲಯವು ಓ.ಎಸ್. (ಮೂಲ ದಾವೆ) ಸಂ. 1999ರ 4964ರಲ್ಲಿ ಪಾಸು ಮಾಡಿರುವ 16.07.2005ನೇ ದಿನಾಂಕದ ತೀರ್ಪು ಮತ್ತು ಡಿಕ್ರಿಯ ಕಾನೂನುಸಮ್ಮತತೆ ಮತ್ತು ಸರಿತನವನ್ನು ಈ ಮೂಲಕ ಪ್ರಶ್ನಿಸಿರುತ್ತಾನೆ. ಮುಂದುವರೆದು, ಅಧಿವಿಚಾರಣಾ ನ್ಯಾಯಾಲಯವು, ವಾರ್ಷಿಕ ಶೇ.12ರ ದರದಲ್ಲಿನ ಬಡ್ಡಿಯೊಂದಿಗೆ 60,000/– ರೂ.ಗಳನ್ನು ಸಂದಾಯ ಮಾಡಲು ಪ್ರತಿವಾದಿಗಳಿಗೆ ನಿರ್ದೇಶಿಸಿ ಮತ್ತು ಮುಂದುವರೆದು, ಪ್ರತಿವಾದಿಗಳು 1999ರ ಜನವರಿಯಿಂದ 1999ರ ಮೇ ವರೆಗೆ ಪ್ರತಿತಿಂಗಳು 1,00,000/–ರೂ. ಮೊಬಲಗನ್ನು ಮತ್ತು 1999ರ ಜೂನ್ ತಿಂಗಳಿನಿಂದ ದಾವಾ ಅನುಸೂಚಿತ ಸ್ವತ್ತಿನ ಅಧಿಭೋಗದ ದಿನಾಂಕದವರೆಗೂ ತಾತ್ಕಾಲಿಕ ಹಾನಿ ಪರಿಹಾರದಂತೆ 3,00,000/– ರೂ.ಗಳನ್ನು ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಿ ಡಿಕ್ರಿಯನ್ನು ನೀಡಿರುತ್ತದೆ.

3. ದಾವಾ ಅನುಸೂಚಿತ ಸ್ವತ್ತು, ಗುಪ್ತಾ ಮಾರುಕಟ್ಟೆ ಹೆಸರಿನಿಂದ ಜನಜನಿತವಾಗಿದ್ದು, ಸಂ. 3235, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–9 ಈ ವಿಳಾಸದಲ್ಲಿದ್ದು, ಕೆಂಪೇಗೌಡ ವೃತ್ತವೆಂದು ಕರೆಯಲಾಗುವ ವೃತ್ತಕ್ಕೆ ಹೊಂದಿಕೊಂಡಂತೆ, ರೈಲು ನಿಲ್ದಾಣ ಮತ್ತು ಕೆಂಪೇಗೌಡ ಬಸ್ ನಿಲ್ದಾಣಕ್ಕೆ ತೀರಾ ಸಮೀಪದಲ್ಲಿದ್ದು, ಬೆಂಗಳೂರಿನ ಹೃದಯ ಭಾಗದಲ್ಲಿರುವ ಒಂದು ಸ್ಥಿರಾಸ್ತಿಯಾಗಿರುತ್ತದೆ.

4. ಅಧಿವಿಚಾರಣಾ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ 12ನೇ ನಿಯಮದ XX ಆದೇಶದಡಿಯಲ್ಲಿ ಉದ್ದೇಶಿಸಲಾದಂತೆ ವಿಚಾರಣೆಯನ್ನು ನಡೆಸಲು

ನಿರ್ದೇಶಿಸದೆ, ಮಧ್ಯಕಾಲೀನ ಲಾಭವಾಗಿ ಪ್ರತಿ ತಿಂಗಳು 10,00,000/– ರೂ.ಗಳ ದರದಲ್ಲಿ ಹಾನಿಗಳನ್ನು ಸಂದಾಯ ಮಾಡಲು, ಪ್ರತಿವಾದಿಗಳನ್ನು ನಿರ್ದೇಶಿಸುವ ಕೋರಿಕೆಯೊಂದಿಗೆ ಅವರ ಪರವಾಗಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಒಪ್ಪಿಕೊಳ್ಳದೆ ದಾವೆಯಲ್ಲಿನ ವಾದಿಗಳು 2012ರ ಆರ್.ಎಫ್.ಎ. ಎದುರು ಆಕ್ಷೇಪಣೆ ಸಂಖ್ಯೆ 2012ರ 36ನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಅಪೀಲು ಮತ್ತು ಎದುರು ಆಕ್ಷೇಪಣೆಗಳನ್ನು ಒಟ್ಟಿಗೆ ಆಲಿಸಲಾಗಿರುತ್ತದೆ.

5. ಅನುಕೂಲಕ್ಕಾಗಿ, ಪಕ್ಷಕಾರರನ್ನು, ಅಧಿವಿಚಾರಣಾ ನ್ಯಾಯಾಲಯದಲ್ಲಿನ ಅವರ ಸ್ಥಾನಮಾನಗಳಿಗನುಸಾರವಾಗಿಯೇ ಉಲ್ಲೇಖಿಸಲಾಗಿದೆ.

6. ನಾವು, ಅಪೀಲುದಾರರ ಪರ ಶ್ರೀ ಯೋಗಾನರಸಿಂಹ, ಮಾನ್ಯ ವಕೀಲರು ಇವರ ವಾದವನ್ನು ಮತ್ತು ಪ್ರತ್ಯರ್ಜಿದಾರರು–ವಾದಿಗಳ ಪರ ವಾದಿಸುತ್ತಿರುವ ಶ್ರೀ ಅರುಣ್ ಕುಮಾರ್, ಮಾನ್ಯ ವಕೀಲರು ಇವರ ವಾದವನ್ನು ಆಲಿಸಿರುತ್ತೇವೆ.

7. ಅಂತಿಮವಾಗಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಇಡೀ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿದ್ದಾಗ್ಯೂ, ತರುವಾಯದ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಪ್ರಶ್ನಿಸಿರುವ ಪ್ರತ್ಯರ್ಜಿದಾರ–ವಾದಿಗಳು ಮೂರನೇ ಪಕ್ಷಕಾರರಿಗೆ ಈಗಾಗಲೇ ಸ್ವತ್ತನ್ನು ಮಾರಿದ್ದು, ಮೂರನೇ ಪಕ್ಷಕಾರರು, ದಾವಾ ಅನುಸೂಚಿತ ಸ್ವತ್ತನ್ನು ಅಧಿಭೋಗಕ್ಕೆ ತೆಗೆದುಕೊಂಡಿರುವುದರಿಂದ ದಾವಾ ಅನುಸೂಚಿತ ಸ್ವತ್ತಿನ ಖಾಲಿ ಅಧಿಭೋಗವನ್ನು ಬಿಟ್ಟುಕೊಡುವುದಕ್ಕೆ ಪ್ರತ್ಯರ್ಜಿದಾರನಿಗೆ ನಿರ್ದೇಶಿಸಿ ಡಿಕ್ರಿ ನೀಡುವುದನ್ನು ಪರಿಗಣಿಸಬೇಕಾಗಿರುವುದಿಲ್ಲ.

8. ಮುಂದುವರೆದು, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು, ಅಪೀಲಿನಲ್ಲಿ ಮತ್ತು ಪಾಟೀಸವಾಲಿನಲ್ಲಿ ಪರಿಗಣಿಸಬೇಕಾದುದೇನೆಂದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದ ಉಪಬಂಧಗಳ ನಿರೂಪಣೆಯಲ್ಲಿ

ಅಭಿಪ್ರಾಯಪಟ್ಟ ವಿಚಾರಣೆಯು ಇತ್ಯರ್ಥದಲ್ಲಿರುವ ಪರಿಗಣನೆಯ ನಷ್ಟ ಪರಿಹಾರದಂತೆ ಮಾಸಿಕ 3,00,000/– ರೂ.ಗಳ ಮೊಬಲಗನ್ನು ಸಂದಾಯ ಮಾಡಲು ಪ್ರತ್ಯರ್ಜಿದಾರರನ್ನು ನಿರ್ದೇಶಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಕ್ಕೆ ಸಂಬಂಧಿಸಿದುದಾಗಿರುತ್ತದೆ ಮತ್ತು ನಷ್ಟ ಪರಿಹಾರದಂತೆ ಮಾಸಿಕ 3,00,000/–ರೂ.ಗಳನ್ನು ನಿಗದಿ ಮಾಡಿರುವುದು ಕಡಿಮೆ ಪ್ರಮಾಣದ್ದಾಗಿದ್ದು, ಎದುರು ಪಕ್ಷಕಾರರು ಕೋರಿದಂತೆ 10,00,000/– ರೂ.ಗಳಿಗೆ ಹೆಚ್ಚಿಸಬೇಕಾದ ಅಗತ್ಯವಿದೆಯೆ ಎಂಬುದಾಗಿರುತ್ತದೆ.

9. ಈ ಪ್ರಕರಣದಲ್ಲಿ ಒಪ್ಪಿಕೊಂಡ ವಾಸ್ತವಾಂಶಗಳೆಂದರೆ: ದಾವಾ ಅನುಸೂಚಿ ಸ್ವತ್ತನ್ನು, 1.4.1960ರಿಂದ ಆರಂಭವಾಗುವಂತೆ 27 ವರ್ಷಗಳ ಅವಧಿಗೆ, ಪ್ರತ್ಯರ್ಜಿದಾರರ ತಾಯಿಯಾಗಿರುವಂಥ ಶ್ರೀಮತಿ ವಿದ್ಯಾವತಿ ದೇವಿಯವರ ಹೆಸರಿನಲ್ಲಿ 1.4.1960ರಂದು ನೋಂದಾಯಿತ ಪತ್ರದ ಅಡಿಯಲ್ಲಿ ಮಾಲೀಕರಾಗಿದ್ದ ಸಿ.ಎಲ್.ಐಯ್ಯಂಗಾರ್‌ರವರು ಭೋಗ್ಯಕ್ಕೆ ನೀಡಿದ ಸ್ವತ್ತಾಗಿರುತ್ತದೆ. ಗೇಣಿ ಪತ್ರದಡಿಯಲ್ಲಿ, ವಿದ್ಯಾವತಿ ದೇವಿಯವರಿಗೆ, ಸದರಿ ಸ್ವತ್ತಿನಲ್ಲಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿದ್ದು 1,25,000/– ರೂ.ಗಳ ಮೌಲ್ಯಕ್ಕೆ ಭೋಗ್ಯದ ಅವಧಿಯು ಮೀರಿದ ತರುವಾಯ ಇಡೀ ಕಟ್ಟಡವನ್ನು ಹಸ್ತಾಂತರಿಸಲು ಅಗತ್ಯಪಡಿಸಿರುತ್ತದೆ. ಮುಂದುವರೆದು, ಭೋಗ್ಯದ ಅವಧಿಯು ಮುಕ್ತಾಯವಾದ ತರುವಾಯ, ಸ್ವತ್ತು ವಾದಿಗಳಿಗೆ ಮತ್ತು ಸಿ.ಎಲ್.ಐಯ್ಯಂಗಾರ್‌ರವರುಗಳಿಗೆ ಹಿಂದಿರುಗಿ ಬಂದಿರುತ್ತದೆ. ತರುವಾಯ 22.12.1973ರಂದು 32 ವರ್ಷಗಳ ಅವಧಿಗೆ ಹೊಸದಾಗಿ ಭೋಗ್ಯವನ್ನು ವಾದಿಗಳು ಮತ್ತು ಅವರ ತಂದೆ, ಪ್ರತಿವಾದಿಗಳ ತಾಯಿ ಶ್ರೀಮತಿ ವಿದ್ಯಾವತಿ ದೇವಿಯ ಹೆಸರಿನಲ್ಲಿ ಮಾಡಿಸಿದ್ದು, ಈ ಅವಧಿಯೂ ಸಹ 31.8.2005ಕ್ಕೆ ಮುಕ್ತಾಯವಾಗಿರುತ್ತದೆ.

10. ಭೋಗ್ಯದ ಅವಧಿಯು ಮುಕ್ತಾಯವಾಗುವ ಮೊದಲೇ ಪ್ರತ್ಯರ್ಜಿದಾರರು ದಾವಾ ಅನುಸೂಚಿತ ಸ್ವತ್ತಿನ ಅಧಿಭೋಗವನ್ನು ಕೋರಿ ಮತ್ತು ಬಾಡಿಗೆ ಬಾಕಿ ಮತ್ತು ತಿಂಗಳಿಗೆ 10,00,000/– ರೂ.ಗಳ ದರದಲ್ಲಿ ದಾವೆಯನ್ನು ಹೂಡಿದ

ದಿನಾಂಕದಿಂದ ಹಸ್ತಾಂತರಿಸುವ ದಿನಾಂಕದವರೆಗೆ ನಷ್ಟಪರಿಹಾರವನ್ನು ಕ್ಲೇಮು ಮಾಡಿ ಪ್ರತ್ಯರ್ಜಿದಾರರ ಭೋಗ್ಯದಾರಿಕೆಯನ್ನು ವಜಾಗೊಳಿಸಿ 22.12.1973ನೇ ದಿನಾಂಕದ ಎರಡನೇ ಅವಧಿಯ ಭೋಗ್ಯದ ಷರತ್ತುಗಳನ್ನು ಉಲ್ಲಂಘಿಸಿರುತ್ತಾರೆಂಬ ಆಧಾರದ ಮೇಲೆ ದಾವೆಯನ್ನು ಹೂಡಲಾಗಿರುತ್ತದೆ.

11. ಪ್ರತ್ಯರ್ಜಿದಾರರು, ಭೋಗ್ಯದ ಯಾವ ಉಲ್ಲಂಘನೆಯು ಆಗಿಲ್ಲವೆಂದು ಮತ್ತು ಭೋಗ್ಯವನ್ನು ವಜಾ ಮಾಡಿರುವುದು ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾಗಿಲ್ಲವೆಂದು ವಾದಿಸಿ ದಾವೆಯನ್ನು ಹೂಡಿರುತ್ತಾರೆ. ಮುಂದುವರೆದು, ಪ್ರತ್ಯರ್ಜಿದಾರರ ತಾಯಿ ವಿದ್ಯಾವತಿ ದೇವಿಯು, ಭೋಗ್ಯಪತ್ರದ ನಿಬಂಧನೆಗಳನುಸಾರ, ಸ್ವತ್ತನ್ನು ಉಪಭೋಗ್ಯಕ್ಕೆ ನೀಡುವ ಹಕ್ಕನ್ನು ಹೊಂದಿದ್ದು, ಉಪ–ಭೋಗ್ಯದಾರರು, ದಾವಾ ಅನುಸೂಚಿತ ಸ್ವತ್ತಿನಲ್ಲಿ ಅಧಿಭೋಗದಾರ ರಾಗಿರುವುದರಿಂದ ವಾದಿಗಳ ದಾವೆಯು ಊರ್ಜಿತವಾಗಿರುವುದಿಲ್ಲವೆಂದು ವಾದಿಸಲಾಗಿರುತ್ತದೆ. ಮುಂದುವರೆದು, ಉಪ–ಭೋಗ್ಯದಾರರ ಗೈರುಹಾಜರಿಯಲ್ಲಿ ಅವರನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದರಿಂದಲೂ, ವಾದಿಗಳು ಸಲ್ಲಿಸಿರುವ ದಾವೆಯು ಊರ್ಜಿತವಾಗಿರುವುದಿಲ್ಲವೆಂದು ವಾದಿಸಿರುತ್ತಾರೆ. ವಾದಿಗಳು ಕ್ಲೇಮು ಮಾಡಿದಂತೆ ಮಾಸಿಕ 10,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಪ್ರತಿವಾದಿಗಳು ಬದ್ಧರಾಗಿರುತ್ತಾರೆಂಬುದನ್ನು ನಿರಾಕರಿಸಲಾಗಿರುತ್ತದೆ.

12. ಪಕ್ಷಕಾರರ ಮೇಲಿನ ವಾದಗಳನ್ನು ಆಧರಿಸಿ, ಅಧಿವಿಚಾರಣಾ ನ್ಯಾಯಾಲಯವು, ತನ್ನ ಪರಿಗಣನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ರೂಪಿಸಲಾಗಿರುತ್ತದೆ:

1. ಕಾನೂನಿಗನುಸಾರವಾಗಿ, ಭೋಗ್ಯದ ವಜಾವನ್ನು ವಾದಿಗಳು ರುಜುವಾತುಪಡಿಸಿರುವರೇ?

2. ವಾದಿಗಳು, ಜನವರಿ 1999ರಿಂದ ಮೇ 1999ನೇ ತಿಂಗಳುಗಳಿಗೆ ಸಂಬಂಧಿಸಿದಂತೆ 3 ಲಕ್ಷ ರೂ.ಗಳ ನಷ್ಟಪರಿಹಾರಕ್ಕೆ ಅವರು ಹಕ್ಕುಳ್ಳವರಾಗಿರುತ್ತಾರೆಂದು ರುಜುವಾತುಪಡಿಸಿರುತ್ತಾರೆಯೇ?

3. ವಾದಿಗಳು, ದಾವೆಯನ್ನು ಹೂಡಿದ ದಿನಾಂಕದಿಂದ ದಾವಾ ಆವರಣಗಳ ಅಧಿಭೋಗವನ್ನು ಬಿಟ್ಟುಕೊಡುವ ದಿನಾಂಕದವರೆಗೂ ಪ್ರತೀತಿಂಗಳು 10 ಲಕ್ಷ ರೂ.ಗಳ ನಷ್ಟಪರಿಹಾರಕ್ಕೆ ಅವರು ಹಕ್ಕುಳ್ಳವರಾಗಿರುತ್ತಾರೆಂದು ರುಜುವಾತು ಪಡಿಸಿರುತ್ತಾರೆಯೇ?

4. ಮಧ್ಯಕಾಲೀನ ಲಾಭಕ್ಕೆ ಸಂಬಂಧಿಸಿದಂತೆ, ಅವರು ವಿಚಾರಣೆಗೆ ಸಂಬಂಧಿಸಿದ ಆದೇಶಕ್ಕೆ ಹಕ್ಕುಳ್ಳವರಾಗಿರುತ್ತಾರೆಯೇ?

5. ವಾದಿಗಳು, ಫೆಬ್ರವರಿ 1998ರಿಂದ ಡಿಸೆಂಬರ್ 1998ರವರೆಗೆ 60,000/- ರೂ.ಗಳ ಬಾಡಿಗೆ ಬಾಕಿಯನ್ನು ಪ್ರತ್ಯರ್ಜಿದಾರರು ಉಳಿಸಿಕೊಂಡಿರುತ್ತಾರೆಂಬುದನ್ನು ರುಜುವಾತುಪಡಿಸಿರುತ್ತಾರೆಯೇ?

6. ಪ್ರತ್ಯರ್ಜಿದಾರರು, ವಾದಪತ್ರದ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ ತಹಲ್‌ವರೆಗೆ ತೆರಿಗೆ ರೂಪದ ಬಾಡಿಗೆಗಳನ್ನು ಅವರು ಸಂದಾಯ ಮಾಡಿರುವುದನ್ನು ರುಜುವಾತುಪಡಿಸಿರುತ್ತಾರೆಯೇ?

8. ಈ ಸಂಬಂಧದಲ್ಲಿ ಯಾವ ಆದೇಶ ಅಥವಾ ತೀರ್ಪನ್ನು ಮಾಡಬೇಕು?

13. ವಾದಿಗಳ ಸಂಬಂಧದಲ್ಲಿ, ಅವರಿಗೆ ಸಂಬಂಧಿಸಿದ ವಾದಗಳನ್ನು ರುಜುವಾತುಪಡಿಸುವ ದೃಷ್ಟಿಯಿಂದ, ಮೊದಲ ವಾದಿ ಸಿ.ಎಲ್.ಶೇಷಾದ್ರಿ ಪಿ.ಡಬ್ಲ್ಯೂ. ಎಂದು ಸ್ವತಃ ವಿಚಾರಣೆಗೊಳಗಾಗಿರುತ್ತಾರೆ. ಮತ್ತು ಇವರು ನಿಶಾನೆ ಪಿ.1ರಿಂದ 16ರವರೆಗಿನ ದಾಖಲೆಗಳ ಮೇಲೆ ಅವಲಂಬಿತರಾಗಿರುತ್ತಾರೆ. ಪ್ರತ್ಯರ್ಜಿದಾರರ ಸಂಬಂಧದಲ್ಲಿ, ಪ್ರವೀಣ್ ಗುಪ್ತ ಎಂಬುವವರನ್ನು ಡಿ.ಡಬ್ಲ್ಯೂ.1 ಎಂದು ವಿಚಾರಣೆ ಮಾಡಲಾಗಿದ್ದು, ನಿಶಾನೆ ಡಿ.1ರಿಂದ 6ರವರೆಗಿನ ದಾಖಲೆಗಳ ಮೇಲೆ ಅವಲಂಬಿತರಾಗಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು, ಪಕ್ಷಕಾರರು ನೀಡಿದ ಇಡೀ ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, 1, 4 ಮತ್ತು 5ನೇ ವಿವಾದಾಂಶಗಳಿಗೆ ಸಕಾರಾತ್ಮಕವಾಗಿಯೂ, ವಿವಾದಾಂಶ ಸಂಖ್ಯೆ 2ಕ್ಕೆ ಭಾಗಶಃ ಸಕಾರಾತ್ಮಕವಾಗಿಯೂ, ವಿವಾದಾಂಶ ಸಂಖ್ಯೆ 3, 6 ಮತ್ತು 7 ಇವುಗಳಿಗೆ ನಕಾರಾತ್ಮಕವಾಗಿಯೂ ಉತ್ತರಿಸಿರುತ್ತದೆ. ಪರಿಣಾಮವಾಗಿ, ದಾವೆಯನ್ನು ಈ ಹಿಂದೆ ಹೇಳಿದಂತೆ ಭಾಗಶಃ ಡಿಕ್ರಿ ಮಾಡಬೇಕಾಗಿದೆ.

14. ಅಪೀಲುದಾರರ ಪರ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಯೋಗಾನರಸಿಂಹ ಇವರು ವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ವಿಚಾರಣೆಯನ್ನು ಕೋರಿರುವಾಗ, ಅಂಥ ವಿಚಾರಣೆ ನಡೆಯದ ಹೊರತು ಮತ್ತು ನಡೆಯುವವರೆಗೂ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಸಂಪೂರ್ಣ ಅಧಿವಿಚಾರಣೆಯನ್ನು ನಡೆಸುವವರೆಗೆ, ಅಧಿವಿಚಾರಣಾ ನ್ಯಾಯಾಲಯವು, ತಿಂಗಳಿಗೆ 3,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ನಿರ್ಧರಿಸುವ ಯಾವುದೇ ಅಧಿಕಾರ ಅಥವಾ ಅಧಿಕಾರ ವ್ಯಾಪ್ತಿ ಹೊಂದಿರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಇವರ ಪ್ರಕಾರ ಅಧಿವಿಚಾರಣಾ ನ್ಯಾಯಾಲಯವು ಅನುಸರಿಸಿರುವ ಕಾರ್ಯವಿಧಾನವು, ವ್ಯತಿರಿಕ್ತವಾಗಿದ್ದು, ಅಧಿಕಾರ ವ್ಯಾಪ್ತಿ

ಇಲ್ಲದಿರುವುದರಿಂದ ಅದು ರದ್ದುಪಡಿಸಲು ತಕ್ಕದ್ದಾಗಿರುತ್ತದೆ. ಇವರು ಪರ್ಯಾಯವಾಗಿ, ಅಂಥ ಅಧಿಕಾರವು, ಅಧೀನ ನ್ಯಾಯಾಲಯ ನಿಹಿತವಾಗಿರುತ್ತದೆಂದು, ಈ ನ್ಯಾಯಾಲಯವು ಅಭಿಪ್ರಾಯಪಟ್ಟರೂ ಪ್ರತೀತಿಂಗಳು 3,00,000/- ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅಧಿವಿಚಾರಣಾ ನ್ಯಾಯಾಲಯಗಳಿಗೆ ಯಾವುದೇ ಆಧಾರವಾಗಲೀ ಅಥವಾ ಅಧಿಕಾರ ವ್ಯಾಪ್ತಿಯಾಗಲೀ ಇರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಇವರು ಮತ್ತು ಮುಂದುವರೆದು, ಕರಾರು ಪತ್ರದ ನಿಬಂಧನೆಗಳಲ್ಲಿ, ಪ್ರತಿವಾದಿಗಳು (ಭೋಗ್ಯದಾರರು) ಹಸ್ತಾಂತರಿಸಬೇಕೆಂದು ಅಗತ್ಯಪಡಿಸಿರುವುದು, ಭೂಮಾಲೀಕರ ಹೆಸರಿನಲ್ಲಿ ಭೋಗ್ಯದ ನೂತನ ಒಡೆತನವನ್ನು ಅಂಗೀಕರಿಸಲು ಉಪಭೋಗ್ಯದಾರರ ಮೇಲೆ ಆಜೀವಿಕೆಯಿಂದ ನೀಡಿರುವ ಸಾಂಕೇತಿಕ ಸ್ವಾಧೀನವಾಗಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ. ಮತ್ತು ಮುಂದುವರೆದು, ವಾದಿಗಳು ಸಲ್ಲಿಸಿದ ಪ್ರಾರ್ಥನೆಯ ಹಿನ್ನೆಲೆಯಲ್ಲಿ, ವಾದಿಗಳು ಸಲ್ಲಿಸಿದ ಪಾಟೀಸವಾಲು ತಿರಸ್ಕರಿಸಲು ಯೋಗ್ಯವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಇವರ ಪ್ರಕಾರ, ವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಉದ್ದೇಶಿಸಿದಂತೆ ವಿಚಾರಣೆಯನ್ನು ನಡೆಸಲು ಪ್ರಾರ್ಥನೆಯನ್ನು ಮಾಡಿರುವಾಗ, ಅಧೀನ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ವಿಚಾರಣೆ ಇತ್ಯರ್ಥದಲ್ಲಿರುವಾಗ, ನಷ್ಟಪರಿಹಾರವಾಗಿ ಯಾವುದೇ ಮೊಬಲಗನ್ನು ನಿಗದಿಪಡಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. ಮತ್ತು ಮುಂದುವರೆದು, ಪಾಟೀಸವಾಲನ್ನು ನಿರಾಶಾದಾಯಕವಾಗಿ ನಡೆದಿರುವುದರಿಂದ ಎದುರು-ಆಕ್ಷೇಪಣೆ ವಜಾಗೊಳಿಸಲು ಎಲ್ಲಾ ದೃಷ್ಟಿಯಿಂದಲೂ ಯುಕ್ತವಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ. ಅವರ ಪ್ರಕಾರ, 2005ನೇ ವರ್ಷದಲ್ಲಿ ಅಪೀಲನ್ನು ಸಲ್ಲಿಸಲಾಗಿತ್ತು ಮತ್ತು ಎದುರು-ಆಕ್ಷೇಪಣೆ 2012ನೇ ವರ್ಷದಲ್ಲಿ ಮಾತ್ರ ಸಲ್ಲಿಸಲಾಗಿರುತ್ತದೆ. ಮತ್ತು ವಿಳಂಬವನ್ನು ಮನ್ನಾಮಾಡಲು, ಪರಿಮಿತಿ ಅಧಿನಿಯಮದ 5ನೇ ಪ್ರಕರಣದಡಿಯಲ್ಲಿ, ಸಲ್ಲಿಸಿದ ಅರ್ಜಿಯಲ್ಲಿ ತೋರಿಸಿರುವ ಕಾರಣವು, ವಿಳಂಬವನ್ನು ಮನ್ನಾಮಾಡಲು ಯುಕ್ತವಾದ ಕಾರಣವಾಗಿರುವುದಿಲ್ಲ. ಆದ್ದರಿಂದ, ಇವರು ಅಪೀಲನ್ನು ಅಂಗೀಕರಿಸಿ, ಎದುರು ಆಕ್ಷೇಪಣೆಯನ್ನು ವಜಾಮಾಡಲು ಕೋರಿರುತ್ತಾರೆ.

15. ಮತ್ತೊಂದು ಕಡೆ, ಪ್ರಶ್ನಿಸಿರುವ ಪ್ರತ್ಯರ್ಜಿದಾರರ ಪರ ವಕೀಲರಾದ ಶ್ರೀ ಅರುಣ್ ಕುಮಾರ್‌ರವರು, ವಾದಿಗಳು ವಾದಪತ್ರದಲ್ಲಿ ನ್ಯಾಯಾಲಯವನ್ನು ಮಾಸಿಕ 10,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ನಿರ್ಧರಿಸಲು ಅಥವಾ ಪರ್ಯಾಯವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XXನೇ ಆದೇಶದಡಿಯಲ್ಲಿ ವಿಚಾರಣೆ ನಡೆಸಲು ಸ್ಪಷ್ಟವಾಗಿ ಕೋರಿರುವುದರಿಂದ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಸ್ತಾಪಿಸಿರುವ ಯಾವುದೇ ಆಧಾರಗಳು ಸಮರ್ಥನೀಯವಾಗಿರುವುದಿಲ್ಲ. ಇವರು ಮತ್ತೂ ಮುಂದುವರೆದು, ಎದುರು ಆಕ್ಷೇಪಣಾಕಾರರು 10,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಕ್ಲೇಮುಮಾಡಲು ಹಕ್ಕುಳ್ಳವರಾಗಿರುತ್ತಾರೆಂದು ತೋರಿಸಲು ಪಿ.ಡಬ್ಲ್ಯೂ.1ರ ಮೂಲಕ ದಸ್ತಾವೇಜೀಯ ಸಾಕ್ಷ್ಯದ ರೂಪದಲ್ಲಿ ಸಾಕಷ್ಟು ಸಾಕ್ಷ್ಯಗಳನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಮಂಡಿಸಲಾಗಿತ್ತೆಂದು ನಿವೇದಿಸಿಕೊಂಡಿರುತ್ತಾರೆ. ಮತ್ತೂ ಮುಂದುವರೆದು, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XXನೇ ಆದೇಶದಡಿಯಲ್ಲಿ ಮುಖ್ಯ ಸಾಕ್ಷ್ಯಕ್ಕೆ ಪಕ್ಷಕಾರರನ್ನು ನಿರ್ದೇಶಿಸದೆ, ನಷ್ಟಪರಿಹಾರವನ್ನು ನಿರ್ದೇಶಿಸಲು ಅಧೀನ ನ್ಯಾಯಾಲಯದ ಮುಂದೆ ಸೂಕ್ತ ಸಾಮಗ್ರಿಗಳಿರುವುದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ವಿಚಾರಣೆಯನ್ನು ನಡೆಸಲು ನ್ಯಾಯಾಲಯವು ಅಧಿಕಾರವನ್ನು ಹೊಂದಿದ್ದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು, ಕಾರ್ಯವಿಧಾನಗಳಿಗೆ ಅಂತಿಮತೆಯನ್ನು ನೀಡುವುದಕ್ಕೆ ಬದಲಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಮುಖ್ಯ ಸಾಕ್ಷ್ಯಕ್ಕೆ ಪಕ್ಷಕಾರರನ್ನು ತಪ್ಪಾಗಿ ನಿರ್ದೇಶಿಸಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಅಲ್ಲದೆ ಅವರು, ಪರ್ಯಾಯವಾಗಿ, ನ್ಯಾಯಾಲಯವು, ಯಾವುದೇ ನಷ್ಟಪರಿಹಾರ ಮೊತ್ತವನ್ನು ನಿಗದಿಪಡಿಸಲು ಅಧಿಕಾರವನ್ನು ಹೊಂದಿರುತ್ತದೆ. ಮತ್ತು ಈ ಪ್ರಕರಣದಲ್ಲಿ 3,00,000/– ಲಕ್ಷ ರೂ.ಗಳ ಮೊಬಲಗನ್ನು ಪಿ.ಡಬ್ಲ್ಯೂ.1 ರವರನ್ನು ಪಾಟೀಸವಾಲು ಮಾಡುವಾಗ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಮಾಡಿದ ಸಲಹೆಯ ಹಿನ್ನೆಲೆಯಲ್ಲಿ ನಿಗದಿ ಮಾಡಲಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಅಧೀನ ನ್ಯಾಯಾಲಯವು, ವಾದಿಗಳ

ಹಿತಾಸಕ್ತಿಯನ್ನು ಸಂರಕ್ಷಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XXನೇ ಆದೇಶದಡಿಯಲ್ಲಿ ನಡಾವಳಿಗಳ ಪರಿಣಾಮಕ್ಕೆ ಒಳಪಟ್ಟು ನಷ್ಟಪರಿಹಾರದ ಮೊಬಲಗನ್ನು ಸಂದಾಯ ಮಾಡಲು ಪ್ರತ್ಯರ್ಜಿದಾರರನ್ನು ನಿರ್ದೇಶಿಸುವ ತೊಂದರೆಯನ್ನು ಕಡಿಮೆ ಮಾಡಲು ಯುಕ್ತವಾಗಿದ್ದಾಗ್ಯೂ, ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಆಧಾರದ ಮೇಲೆ ಇದನ್ನು ಪ್ರಶ್ನಿಸುವಂತಿರುವುದಿಲ್ಲ. ಇವರ ಪ್ರಕಾರ, ಭೋಗ್ಯವು ವಜಾಗೊಂಡಿದ್ದರೂ ಕೂಡ, ಪ್ರತಿವಾದಿಗಳು, ವಾದಿಗಳ ಸ್ವತ್ತನ್ನು, ಯಾವುದೇ ಹಕ್ಕಿಲ್ಲದೆ ಅನುಭವಿಸುತ್ತಿರುವಾಗ, ಪ್ರತಿವಾದಿಗಳು ಉಪಭೋಗ್ಯದಾರರಿಂದ ಪಡೆಯುತ್ತಿರುವ ಆದಾಯ ಮತ್ತು ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಸ್ವತ್ತಿನ ಜಾಗವನ್ನು ಪರಿಗಣಿಸಿ ಮತ್ತು ಪ್ರತಿವಾದಿಗಳ ಪರ ಮಾನ್ಯ ವಕೀಲರು ನೀಡಿರುವ ಸಲಹೆಯನ್ನು ಆಧರಿಸಿ, ವಾದಿಗಳ ಹಿತಾಸಕ್ತಿಯನ್ನು ಸಂರಕ್ಷಿಸುವ ದೃಷ್ಟಿಯಲ್ಲಿ, ಅಧೀನ ನ್ಯಾಯಾಲಯವು, ತನ್ನ ವಿವೇಚನಾಧಿಕಾರವನ್ನು ಚಲಾಯಿಸಿ, 3,00,000/- ರೂ.ಗಳ ಮೊಬಲಗನ್ನು ನಷ್ಟಪರಿಹಾರದಂತೆ ಗೊತ್ತುಪಡಿಸಿದ್ದಾಗ್ಯೂ, ಅಧೀನ ನ್ಯಾಯಾಲಯವು ದೋಷವನ್ನು ಎಸಗಿದೆಯೆಂದು ವಾದಿಸುವಂತಿಲ್ಲ. ಅವರ ಪ್ರಕಾರ, ಪ್ರಕರಣದ ಹಿನ್ನೆಲೆಯನ್ನು ಸ್ವತ್ತಿನ ಪ್ರದೇಶ ಮತ್ತು ಪ್ರತಿವಾದಿಗಳು ರೂಪಿಸಿದ ಸ್ವತ್ತಿನಿಂದ ಬಂದ ವಾಸ್ತವಿಕ ವೆಚ್ಚಗಳನ್ನು ಪರಿಗಣಿಸಿ, ಅಲ್ಲದೆ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ನೀಡಿದ ಸಲಹೆಯನ್ನು ಆಧರಿಸಿ, ನಿಗದಿಪಡಿಸಿದ ಮೊಬಲಗನ್ನು ತಪ್ಪೆಂದು ನಿರೂಪಿಸಲಾಗುವುದಿಲ್ಲ. ಆದ್ದರಿಂದ, ಅಪೀಲನ್ನು ವಜಾಮಾಡಿ, ಎದುರು ಆಕ್ಷೇಪಣೆಯನ್ನು ಅಂಗೀಕರಿಸಬೇಕೆಂದು ನ್ಯಾಯಾಲಯವನ್ನು ಕೋರಲಾಗಿದೆ.

16. ಪಕ್ಷಕಾರರ ಪರ ಮಾನ್ಯ ವಕೀಲರುಗಳ ವಾದಗಳನ್ನು ನಾವು ಆಲಿಸಿದ್ದು, ನಾವು ಈ ಅಪೀಲಿನಲ್ಲಿ ಈ ಮುಂದಿನ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ :

(ಎ) ಅಧೀನ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಪ್ರತಿವಾದಿಗಳು

ಸಂದಾಯ ಮಾಡಬಹುದಾದ ನಷ್ಟ ಪರಿಹಾರಗಳನ್ನು ನಿರ್ಧರಿಸುವ ವಿವೇಚನಾಧಿಕಾರವನ್ನು ಹೊಂದಿರುತ್ತದೆಯೇ?

(ಬಿ) ತಿಂಗಳಿಗೆ 3,00,000/– ರೂ.ಗಳ ದರದಲ್ಲಿ ಅಧೀನ ನ್ಯಾಯಾಲಯವು ಮೊಬಲಗನ್ನು ಗೊತ್ತುಪಡಿಸಿರುವುದನ್ನು ಈ ಅಪೀಲಿನೊಂದಿಗೆ ಅಥವಾ ಎದುರು ಆಕ್ಷೇಪಣೆಯೊಂದಿಗೆ ಸೇರಿಸಬಹುದೇ?

17. ನಾವು ವಾದಪತ್ರದಲ್ಲಿನ ಕೋರಿಕೆಯನ್ನು ನೋಡಿರುತ್ತೇವೆ. ವಾದಪತ್ರದಲ್ಲಿ, ವಾದಿಗಳು, ದಾವಾ ಅನುಸೂಚಿತ ಸ್ವತ್ತಿನ ಭೌತಿಕ ಅಧಿಭೋಗವನ್ನು ಹಸ್ತಾಂತರಿಸಲು ಪ್ರತಿವಾದಿಗಳನ್ನು ನಿರ್ದೇಶಿಸಲು ಮತ್ತು 1999ರ ಜನವರಿಯಿಂದ ಮೇ ವರೆಗೆ ದಾವಾ ಅನುಸೂಚಿತ ಸ್ವತ್ತಿನ ಕಾನೂನುಬಾಹಿರ ಮತ್ತು ಅನಧಿಕೃತ ಅಧಿಭೋಗಕ್ಕೆ ಸಂಬಂಧಿಸಿದಂತೆ ವಾದಿಗಳಿಗೆ ಮಾಸಿಕ 3,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಸಂದಾಯ ಮಾಡಲು, ಅಲ್ಲದೆ ದಾವೆಯನ್ನು ಸಲ್ಲಿಸಿದ ದಿನದಿಂದ ಅಧಿಭೋಗವನ್ನು ಬಿಟ್ಟುಕೊಡುವ ದಿನದವರೆಗೆ 10,00,000/– ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದ ಉಪಬಂಧಗಳಡಿಯಲ್ಲಿ ವಿಚಾರಣೆಯನ್ನು ನಿರ್ದೇಶಿಸಲು ಮತ್ತು 1998ರ ಫೆಬ್ರವರಿಯಿಂದ ಮೇ ವರೆಗಿನ ಅವಧಿಗೆ ಸಂಬಂಧಿಸಿದ ಬಾಡಿಗೆಯ ಬಾಕಿಗೆ ಸಂಬಂಧಿಸಿದಂತೆ 60,000/– ರೂ.ಗಳನ್ನು ಸಂದಾಯ ಮಾಡುವಂತೆ ಪ್ರತಿವಾದಿಗಳನ್ನು ನಿರ್ದೇಶಿಸಲು ಅಧಿವಿಚಾರಣಾ ನ್ಯಾಯಾಲಯವನ್ನು ಕೋರಿರುತ್ತಾರೆ.

18. ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿಯಾಗಲೀ ಅಥವಾ ಸ್ವತ್ತಿನ ವರ್ಗಾವಣೆ ಅಧಿನಿಯಮ, 1882ರಡಿಯಲ್ಲಾಗಲೀ ಸ್ವತ್ತಿನ ಅಧಿಕೃತ ಅಧಿಭೋಗದಲ್ಲಿರುವಂಥ ವ್ಯಕ್ತಿಗೆ ದಾವೆಯನ್ನು ಹೂಡಿದ ದಿನಾಂಕದಿಂದ

ಅಧಿಭೋಗವನ್ನು ಬಿಟ್ಟುಕೊಡುವ ದಿನಾಂಕದವರೆಗೂ ದಾವೆಯು ಇತ್ಯರ್ಥದಲ್ಲಿರುವಾಗ ತತ್ಕಾಲೀನ ನಷ್ಟಪರಿಹಾರ ಅಥವಾ ತತ್ಕಾಲೀನ ಬಾಡಿಗೆಗೆ ಸಂದಾಯ ಮಾಡಲು ಯಾವುದೇ ಸೂಕ್ತ ಉಪಬಂಧಗಳಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ, ಪಿ.ಡಬ್ಲ್ಯೂ.1, ದಾವೆಯನ್ನು ಹೂಡಿದ ದಿನಾಂಕದಿಂದ ಅಧಿಭೋಗವನ್ನು ಬಿಟ್ಟುಕೊಡುವ ದಿನಾಂಕದವರೆಗೂ 10,00,000/- ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಕ್ಲೇಮು ಮಾಡಿಕೊಳ್ಳಲು ವಾದಿಗಳು ಹೇಗೆ ಹಕ್ಕುಳ್ಳವರಾಗಿರುತ್ತಾರೆಂಬುದನ್ನು ತೋರಿಸಲು ಹಲವಾರು ದಸ್ತಾವೇಜುಗಳನ್ನು ಹಾಜರುಪಡಿಸಿರುತ್ತಾರೆ. ದಾವೆಯನ್ನು 1999ರಲ್ಲಿ ಆರಂಭಿಸಿದ್ದು, 2005ನೇ ವರ್ಷದಲ್ಲಿ ಡಿಕ್ರಿಯಾಗಿರುತ್ತದೆ. ಪಿ.ಡಬ್ಲ್ಯೂ.1ನ್ನು ಪಾಟೀಸವಾಲು ಮಾಡಲಾಗಿರುತ್ತದೆ. ಪಿ.ಡಬ್ಲ್ಯೂ.1 ರವರನ್ನು ಪಾಟೀಸವಾಲು ಮಾಡುವಾಗ, ಅಧಿವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿಗಳ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಈ ಮುಂದಿನ ಸಲಹೆಯನ್ನು ಮಾಡಿರುತ್ತಾರೆ :

> "ಸ್ವತ್ತನ್ನು ಬೇರೆಯವರಿಗೆ ಕೊಟ್ಟಿದ್ದರೆ, ಕನಿಷ್ಠ ಆ ಸ್ವತ್ತಿಗೆ ಪ್ರತಿತಿಂಗಳು 3,00,000/- ರೂ.ಗಳಷ್ಟು ಹಣ ಬಾಡಿಗೆಯಿಂದ ಬರುತ್ತಿತ್ತೆಂದು ಸಲಹೆ ಮಾಡಿರುವುದು ಸರಿಯಾದುದಾಗಿರುವುದಿಲ್ಲ."

ಪ್ರತೀ ತಿಂಗಳು 10,00,000/-ರೂ.ಗಳ ದರದಲ್ಲಿ ನಷ್ಟಪರಿಹಾರವನ್ನು ಪಿ.ಡಬ್ಲ್ಯೂ.1 ಕ್ಲೇಮು ಮಾಡಿರುವುದರಿಂದ, ಪಿ.ಡಬ್ಲ್ಯೂ.1ರವರೆಗೆ ಈ ಸಲಹೆಯನ್ನು ಮಾಡಲಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತಿವಾದಿಗಳ ಪರ ಮಾನ್ಯ ವಕೀಲರು ಮಾಡಿದ ಸಲಹೆಯನ್ನು ಪರಿಗಣಿಸಿದಲ್ಲಿ, ವಕೀಲರ ಅಭಿಪ್ರಾಯದಂತೆ ಕೂಡ, ಆ ದಿನಾಂಕದಂದು ಇದ್ದಂತೆ, ಸ್ವತ್ತನ್ನು ಬೇರೆಯವರಿಗೆ ಬಾಡಿಗೆ ನೀಡಿದ್ದರೆ ಹೇಗೋಹಾಗೆ ತಿಂಗಳಿಗೆ 3,00,000/- ರೂ.ಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು, ಈ ಸಲಹೆಯನ್ನು ಆಧರಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ 12ನೇ ನಿಯಮದ XX ಆದೇಶಗಳಡಿಯಲ್ಲಿ

ವಿಚಾರಣೆಯು ಪೂರ್ಣಗೊಳ್ಳುವವರೆಗೆ ಪ್ರತೀತಿಂಗಳು 3,00,000/– ರೂ.ಗಳ ದರದಲ್ಲಿ ತತ್ಕಾಲೀನ ಮೊಬಲಗನ್ನು ನಿಗದಿ ಮಾಡಲಾಗಿರುತ್ತದೆ.

19. ತತ್ಕಾಲೀನ ನಷ್ಟಪರಿಹಾರವನ್ನು ಗೊತ್ತುಪಡಿಸಲು ನ್ಯಾಯಾಲಯಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತ ಉಪಬಂಧವಿರುವುದಿಲ್ಲವೆಂಬ ವಾಸ್ತವಾಂಶದಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಆದರೆ, ಈ ಪ್ರಕರಣದ ಹಿನ್ನೆಲೆಯನ್ನು ಪರಿಗಣಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಸಂಪೂರ್ಣ ಅಧಿವಿಚಾರಣೆಯ ತರುವಾಯ, ಸದರಿ ಮೊಬಲಗನ್ನು ಅಂತಿಮವಾಗಿ ಅಧಿವಿಚಾರಣೆ ಮಾಡುವುದರಿಂದ, ಪ್ರತೀತಿಂಗಳು 10,00,000/– ರೂ.ಗಳ ದರದಲ್ಲಿ, ವಾದಿಗಳು ನಷ್ಟಪರಿಹಾರವನ್ನು ಕ್ಲೇಮು ಮಾಡಿದ್ದಾಗ್ಯೂ, ಪಿ.ಡಬ್ಲ್ಯೂ.1ರ ಪಾಟೀಸವಾಲು ಮಾಡಿದ ದಿನಾಂಕದಂದು ಇದ್ದಂತೆ ಪ್ರತೀತಿಂಗಳು 3,00,000/– ರೂ.ಗಳ ಮೊಬಲಗನ್ನು, ಸ್ವತ್ತು ಬಾಡಿಗೆ ಪಡೆದುಕೊಳ್ಳುವುದರಿಂದ ಹೊರಗಿದ್ದು ಪಡೆಯಬಹುದೆಂದು, ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಸಲಹೆಯನ್ನು ನೀಡಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯವು, ತನ್ನ ವಿವೇಚನೆಯನ್ನು ಬಳಸಿ, ಪ್ರತಿವಾದಿಗಳು ಯಾವುದೇ ಬಾಡಿಗೆಯನ್ನು ಸಂದಾಯ ಮಾಡದೆ ವಾದಿಗಳ ಸ್ವತ್ತನ್ನು ಅನುಭೋಗಿಸುವುದರಿಂದ ವಾದಿಗಳಿಗೆ ಆಗುವ ತೊಂದರೆಯನ್ನು ತಪ್ಪಿಸುವ ದೃಷ್ಟಿಯಿಂದ ತತ್ಕಾಲೀನ ನಷ್ಟಪರಿಹಾರವನ್ನು ನಿಗದಿ ಮಾಡಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ನಡೆಸಬೇಕಾದ ವಿಚಾರಣೆಯಲ್ಲಿನ ಅಂತಿಮ ತೀರ್ಮಾನಕ್ಕೆ ಒಳಪಟ್ಟು, ಇದನ್ನು ಈ ನ್ಯಾಯಾಲಯವು ಇಂಥ ನಿರ್ಧಾರವನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ವಾದಿಗಳು, ತಾವು ವಾದಿಸಲಾದಂತೆ 3,00,000/– ರೂ.ಗಳು ಅಥವಾ 10,00,000/– ರೂ.ಗಳಿಗಿಂತ ಹೆಚ್ಚಿನ ಮಧ್ಯಕಾಲೀನ ಪರಿಹಾರಗಳಿಗೆ ಅವರು ಹಕ್ಕುಳ್ಳವರಾಗಿರುತ್ತಾರೆಂಬುದನ್ನು ಸಾಬೀತುಪಡಿಸಲು ಸಮರ್ಥರಾದಲ್ಲಿ ಪ್ರತಿವಾದಿಗಳು ಸಂದಾಯ ಮಾಡಬೇಕಾದ ತತ್ಕಾಲೀನ ಪರಿಹಾರದ ಮೊಬಲಗನ್ನು ಅಂತಿಮವಾಗಿ ಹೊಂದಾಣಿಕೆ ಮಾಡಬೇಕಾಗುವುದೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಆದಾಗ್ಯೂ, ವಾದಿಗಳು

10,00,000/– ರೂ.ಗಳ ದರದಲ್ಲಿನ ನಷ್ಟಪರಿಹಾರಕ್ಕೆ ಅವರು ಹಕ್ಕುಳ್ಳವರಾಗಿರುವನೆಂದು ಸಾಬೀತುಪಡಿಸಲು ವಿಫಲವಾದಲ್ಲಿ ಮತ್ತು ಅಂತಿಮವಾಗಿ ನಷ್ಟಪರಿಹಾರವನ್ನು 3,00,000/– ರೂ.ಗಳಿಗಿಂತ ಕಡಿಮೆಯೆಂದು ನಿರ್ಧರಿಸಿದ ಯಾವುದೇ ಅಂಥ ಸಂದರ್ಭದಲ್ಲಿ ಆ ವಾದಿಗಳು, ತಾವು ಹಾಗೆ ಸಂಗ್ರಹಿಸಿದ ಮೊಬಲಗನ್ನು ಅಂತಿಮ ಡಿಕ್ರಿ ನಡಾವಳಿಗಳಲ್ಲಿ ಆದೇಶಿಸಬೇಕಾದ ಬಡ್ಡಿಯೊಂದಿಗೆ ಪ್ರತಿವಾದಿಗಳಿಗೆ ಹಿಂದಿರುಗಿಸಬೇಕಾಗುತ್ತದೆ. ಕಾನೂನು ವ್ಯವಹರಣೆಗಳು ಪೂರ್ಣಗೊಳ್ಳಲು ಸಮಯಬೇಕಾಗುತ್ತದೆ. ಆದ್ದರಿಂದ, ನ್ಯಾಯಾಲಯವು ನ್ಯಾಯನಿರ್ಣಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವ ಅವಶ್ಯಕತೆಯಿರುವುದರಿಂದ ಮತ್ತು ನ್ಯಾಯಾಲಯ ಕ್ರಮದ ಪ್ರಕ್ರಿಯೆಯು ದುರುಪಯೋಗಗಳನ್ನು ತಪ್ಪಿಸುವ ದೃಷ್ಟಿಯಿಂದ ಅಂಥ ಆದೇಶಗಳನ್ನು ಹೊರಡಿಸುವ ಅಂತರ್ನಿಹಿತ ಅಧಿಕಾರವನ್ನು ಹೊಂದಿರುತ್ತದೆ. ನಡಾವಳಿಗಳ ವಿಳಂಬ ಗತಿಯನ್ನು, ನ್ಯಾಯಾಲಯ ಕ್ರಮದ ಪ್ರಕ್ರಿಯೆಯ ದುರುಪಯೋಗವೆಂದು ಪರಿಗಣಿಸಬೇಕಾಗಿರುತ್ತದೆ. ಪಕ್ಷಕಾರರ ಕಾನೂನಾತ್ಮಕ ಹಕ್ಕುಗಳನ್ನು ಸೂಕ್ತವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇರುತ್ತದೆ. ಆದಾಗ್ಯೂ ಅಂಥ ತತ್ಕಾಲೀನ ನಿರ್ಧರಣೆಯನ್ನು ಕೆಲವು ವಿಷಯಗಳ ಮೇಲೆ ಆಧರಿಸಬೇಕಾಗುತ್ತದೆ. ಅಧೀನ ನ್ಯಾಯಾಲಯಗಳು ಲಭ್ಯ ವಿಷಯಗಳ ಮೇಲೆ ಅವಲಂಬಿತವಾಗಿರುತ್ತವೆ. ಇವು ಆದೇಶಗಳನ್ನು ಹೊರಡಿಸುವಲ್ಲಿ ತಮ್ಮ ಇಚ್ಛಾಶಕ್ತಿಯನ್ನು ಹೊಂದಿಸಿಕೊಂಡಿರುತ್ತವೆ. ಈ ಸಂದರ್ಭಗಳಡಿಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ತತ್ಕಾಲೀನ ನಷ್ಟಪರಿಹಾರಗಳನ್ನು ನಿಗದಿಮಾಡುವ ಆದೇಶವನ್ನು ಹೊರಡಿಸಲು ಅಂತರ್ನಿಹಿತ ಅಧಿಕಾರವನ್ನು ಚಲಾಯಿಸುತ್ತವೆ. ನ್ಯಾಯಾಲಯುವು, ತತ್ಕಾಲೀನ ನಷ್ಟಪರಿಹಾರವನ್ನು ನಿಗದಿಮಾಡಲು ಅಂತರ್ನಿಹಿತ ಅಧಿಕಾರವನ್ನು ಹೊಂದಿರುತ್ತವೆಂದು ಹೇಳಲು ನಮಗೆ ಯಾವುದೇ ಮುಜುಗರವಾಗುವುದಿಲ್ಲ. ಆದ್ದರಿಂದ, ಉಭಯ ಪಕ್ಷಕಾರರ ಹಿತಾಸಕ್ತಿಯನ್ನು ರಕ್ಷಿಸುವ ದೃಷ್ಟಿಯಲ್ಲಿ, ಅಧೀನ ನ್ಯಾಯಾಲಯವು 3,00,000/– ರೂ.ಗಳ ದರದಲ್ಲಿ ತತ್ಕಾಲೀನ ನಷ್ಟಪರಿಹಾರವನ್ನು ನಿಗದಿಪಡಿಸಿರುವುದನ್ನು, ಅಧಿಕಾರ ವ್ಯಾಪ್ತಿಯಿಲ್ಲದೆ ಮಾಡಿದೆಯೆಂದು ಹೇಳಲಾಗುವುದಿಲ್ಲ. ನ್ಯಾಯಾಲಯವು ತನ್ನ ವಿವೇಚನಾಧಿಕಾರವನ್ನು ಚಲಾಯಿಸುವಾಗ, ಪಕ್ಷಕಾರರ ಹಿತಾಸಕ್ತಿ ಮತ್ತು ಸ್ವತ್ತಿನ ಸುರಕ್ಷತೆಯನ್ನು ಸಂರಕ್ಷಿಸುವಾಗ, ತತ್ಕಾಲೀನ

ನಷ್ಟಪರಿಹಾರಗಳನ್ನು ಸಂದಾಯ ಮಾಡಲು ಪಕ್ಷಕಾರರಿಗೆ ಯಾವಾಗಲೂ ನಿರ್ದೇಶಿಸುತ್ತಿರುತ್ತದೆ. ಆದ್ದರಿಂದ, ತತ್ಕಾಲೀನ ನಷ್ಟಪರಿಹಾರವನ್ನು ನಿರ್ಧರಿಸುವ ಅಧಿವಿಚಾರಣಾ ನ್ಯಾಯಾಲಯವು ಯಾವುದೇ, ಕಾನೂನುಬಾಹಿರತೆ ಅಥವಾ ಅಕ್ರಮತೆ ಅಥವಾ ತಪ್ಪನ್ನು ಎಸಗಿರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.

20. ಅಧಿವಿಚಾರಣಾ ನ್ಯಾಯಾಲಯವು, ತತ್ಕಾಲೀನ ನಷ್ಟಪರಿಹಾರವಾಗಿ, ತಿಂಗಳಿಗೆ 3,00,000/– ರೂ.ಗಳ ಮೊಬಲಗನ್ನು ನಿಗದಿಪಡಿಸಿರುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಈಗಾಗಲೇ ಪ್ರಸ್ತಾಪಿಸಿರುವಂತೆ, ದಾವೆಯಲ್ಲಿ ಪ್ರತಿವಾದಿಗಳ ಪರ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು, ಪಿ.ಡಬ್ಲ್ಯೂ.1 ರವರಿಗೆ ದಾವಾ ಅನುಸೂಚಿತ ಸ್ವತ್ತನ್ನು ಬೇರೆಯವರಿಗೆ ಬಾಡಿಗೆ ನೀಡಿ ಇದಕ್ಕಿಂತ ಹೆಚ್ಚಿನದನ್ನು ಪಡೆಯಬಹುದಿತ್ತೆಂದು ಸಲಹೆ ನೀಡಿರುತ್ತಾರೆ. ಇಂಥ ಸಲಹೆಗಳನ್ನು, ನಷ್ಟಪರಿಹಾರವನ್ನು ನಿರ್ಧರಿಸುವಾಗ ಹಗುರವಾಗಿ ತಳ್ಳಿಹಾಕಲಾಗುವುದಿಲ್ಲ. ಹಾಗಿರುವುದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XX ಆದೇಶದಡಿಯಲ್ಲಿ ಸಂಪೂರ್ಣವಾಗಿ ಅಧಿವಿಚಾರಣೆಯನ್ನು ಮಾಡಿದ ತರುವಾಯ, ಸಂದಾಯ ಮಾಡಬಹುದಾದ ವಾಸ್ತವಿಕ ನಷ್ಟಪರಿಹಾರವನ್ನು ಅಂತಿಮವಾಗಿ ಅಧಿವಿಚಾರಣಾ ನ್ಯಾಯಾಲಯವೇ ನಿರ್ಧರಿಸಬೇಕಾಗುತ್ತದೆ. ಹಾಗಾಗಿ, ತದನುಸಾರವಾಗಿಯೇ ಎರಡೂ ಅಂಶಗಳಿಗೂ ಉತ್ತರಿಸಲಾಗಿರುತ್ತದೆ.

21. ಎದುರು ಆಕ್ಷೇಪಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ನಾವು ಯಾವುದೇ ಗುಣಾರ್ಹತೆಗಳನ್ನು ಕಾಣುವುದಿಲ್ಲ. ಏಕೆಂದರೆ, ಅಧಿವಿಚಾರಣಾ ನ್ಯಾಯಾಲಯವು, ನಷ್ಟಪರಿಹಾರವನ್ನು ನಿಗದಿಮಾಡಲು ಇಡೀ ಸಾಕ್ಷ್ಯವನ್ನು ವಿವೇಚಿಸಿರುವುದಿಲ್ಲ. ಡಿಫೆನ್ಸ್ ನ್ಯಾಯವಾದಿಗಳ ಸಲಹೆಯ ಮೇರೆಗೆ ತತ್ಕಾಲೀನ ನಷ್ಟಪರಿಹಾರವನ್ನು ನಿಗದಿ ಮಾಡಲಾಗಿರುತ್ತದೆ. ವಾದಿಗಳು ಕ್ಲೇಮು ಮಾಡಿರುವ 10,00,000/– ರೂ. ಮೊಬಲಗನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ನಿಯಮದ XXನೇ ಆದೇಶದಡಿಯಲ್ಲಿ ವಿಚಾರಣೆಯು ನಡೆದಾಗ ನೀಡಬೇಕಾಗಿರುತ್ತದೆ. ಆದ್ದರಿಂದ, ನಮಗೆ ಅಪೀಲಿನಲ್ಲಿ ವಾದಿಸುತ್ತಿರುವ ಪ್ರತ್ಯರ್ಜಿದಾರರು ಸಲ್ಲಿಸಿರುವ ಎದುರು

ಆಕ್ಷೇಪಣೆಯಲ್ಲಿ ಯಾವುದೇ ಗುಣಾರ್ಹತೆಗಳು ಕಂಡುಬರುವುದಿಲ್ಲ. ಆದಾಗ್ಯೂ, ಎದುರು ಆಕ್ಷೇಪಣೆಯನ್ನು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೆಂಬ ಅಪೀಲುದಾರರ ಪರ ಮಾನ್ಯ ವಕೀಲರ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಇಡೀ ದಸ್ತಾವೇಜುಗಳನ್ನು ಪರಿಶೀಲಿಸಿರುವುದರಿಂದ 2005ನೇ ವರ್ಷದಲ್ಲಿ ಅಪೀಲನ್ನು ಸಲ್ಲಿಸಿದ್ದಾಗ್ಯೂ, ಅದನ್ನು ಯಾವುದೇ ಕ್ರಮ ಜರುಗಿಸದೆ ವಜಾಗೊಳಿಸಬೇಕಾಗುತ್ತದೆಂಬುದನ್ನು ಮತ್ತು ಇದನ್ನು 2010ರಲ್ಲಿ ಪುನಃ ಕಡತಕ್ಕೆ ಸೇರಿಸಲಾಗಿರುವುದನ್ನು ನಾವು ಗಮನಿಸಿರುತ್ತೇವೆ. ನಂತರವೇ ಅಪೀಲು ಅಂಗೀಕರಿಸಲ್ಪಟ್ಟಿರುತ್ತದೆ. ಅಪೀಲು ಅಂಗೀಕೃತವಾದ ದಿನಾಂಕ ಮತ್ತು ಎದುರು ಆಕ್ಷೇಪಣೆಯನ್ನು ಸಲ್ಲಿಸಿದ ದಿನಾಂಕ ಇವುಗಳನ್ನು ಪರಿಗಣಿಸಿ, ಎದುರು–ಆಕ್ಷೇಪಣೆ ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಬೇಕಾಗಿರುತ್ತದೆಂದು ನಾವು ಅಭಿಪ್ರಾಯಪಟ್ಟಿರುತ್ತೇವೆ. ತದನುಸಾರವಾಗಿ, ನಾವು ವಿಳಂಬವನ್ನು ಮನ್ನಾ ಮಾಡಿರುತ್ತೇವೆ.

22. ಪರಿಣಾಮವಾಗಿ, ಅಪೀಲು ಮತ್ತು ಎದುರು ಆಕ್ಷೇಪಣೆಗಳನ್ನು ವಜಾಗೊಳಿಸಲಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಪುಷ್ಟೀಕರಿಸಲಾಗಿರುತ್ತದೆ. ಪಕ್ಷಕಾರರು ಅವರ ವೆಚ್ಚಗಳನ್ನು ಭರಿಸಬೇಕಾಗಿರುತ್ತದೆ.